

# ನಾಲಿಗೆಯೇ ಕುಂಚ!

ಚಿತ್ರ ಕಲಾವಿದರು ಕುಂಚ ಬಳಸುವುದು ಸಹಜ. ಆದರೆ ಕೇರಳದಲ್ಲಿರುವ ಅನಿ ಕೆ. ಎಂಬ ಕಲಾವಿದ ತಮ್ಮ ನಾಲಿಗೆಯನ್ನೇ ಕುಂಚದ ರೀತಿ ಬಳಸಿ ಚಿತ್ರ ಬಿಡಿಸುತ್ತಾರೆ. ತಮ್ಮ ನಾಲಿಗೆಯನ್ನು ಬಣ್ಣಗಳಲ್ಲಿ ಅದ್ದಿ ಅದ್ದಿ ಚಿತ್ರ ರಚಿಸುತ್ತಾರೆ.

ವೃತ್ತಿಯಲ್ಲಿ ಡ್ರಾಯಿಂಗ್ ಟೀಚರ್ ಆಗಿರುವ 35 ವರ್ಷದ ಅನಿಗೆ ಏನನ್ನಾದರೂ ಹೊಸತನ್ನು ಸಾಧಿಸಬೇಕೆನ್ನುವ ತುಡಿತ ಇತ್ತು.

‘ಕಾಲಿನಿಂದ ಚಿತ್ರ ರಚಿಸುವ ಕಲಾವಿದನ ಬಗ್ಗೆ ಓದಿ ಸ್ಫೂರ್ತಿಗೊಂಡಿದ್ದೆ. ನಾನೂ ಹಾಗೆಯೇ ಭಿನ್ನ ರೀತಿಯಲ್ಲಿ ಚಿತ್ರ ಬಿಡಿಸಬೇಕೆಂದು ನಿಶ್ಚಯಿಸಿದೆ. ಮೂಗಿನ ತುದಿ, ಮೊಣಕೈ, ಗದ್ದ ಮೊದಲಾದವುಗಳಿಂದ ಚಿತ್ರ ಬಿಡಿಸಲು ಪ್ರಯತ್ನಿಸಿ ನಂತರ ಆ ಯೋಚನೆಯನ್ನು ಕೈಬಿಟ್ಟೆ. ನನ್ನ ಎರಡೂ ಕೈಗಳಿಂದ ಏಕಕಾಲದಲ್ಲಿ ಚಿತ್ರ ಬಿಡಿಸಲು ಹಾಗೂ ಬೈಕ್‌ನಲ್ಲಿ ಸವಾರಿ ಮಾಡುತ್ತ ಚಿತ್ರ ರಚಿಸಲು ಸಹ ಪ್ರಯತ್ನಿಸಿದೆ. ಆಗ ನನಗೆ ಹೊಳೆದದ್ದು ನಾಲಿಗೆಯಿಂದ ಚಿತ್ರ ಬಿಡಿಸಬಾರದೇಕೆ ಎಂಬ ಐಡಿಯಾ. ನಾಲಿಗೆಯಿಂದ ಬಣ್ಣವನ್ನು ಅದ್ದಿ ಅದ್ದಿ ಕ್ಯಾನ್ವಾಸ್ ಮೇಲೆ ಚಿತ್ರ ಬಿಡಿಸಲು ಪ್ರಾರಂಭ ಮಾಡಿ ಅದರಲ್ಲಿ ಯಶಸ್ವಿಯಾದೆ’ ಎನ್ನುತ್ತಾರೆ ಅನಿ.

‘ಮೊದಮೊದಲು ಆರೋಗ್ಯದ ಸಮಸ್ಯೆ ತೀವ್ರವಾಗಿ ಕಾಡಿತು. ಬಣ್ಣದ ಕಟು ವಾಸನೆಗೆ ಅಸಾಧ್ಯವಾದ ತಲೆನೋವು, ಮೈ ಕೈ ನೋವು, ಸ್ಮರಣ ಶಕ್ತಿ ಕ್ಷೀಣತೆ, ಸ್ವಲ್ಪ ದೃಷ್ಟಿದೋಷ ಎಲ್ಲವೂ ಶುರುವಾಯಿತು. ಬರು ಬರುತ್ತಾ ಅದಕ್ಕೆ ಒಗ್ಗಿಕೊಂಡೆ’ ಎಂದು ಅನಿ ನುಡಿಯುತ್ತಾರೆ.

‘ಅಡ್ಡ ಪರಿಣಾಮಗಳು ಬಹಳ ಆಗುವುದರಿಂದ ನನ್ನ ಹಾಗೆ ನಾಲಿಗೆಯಿಂದ ಮಾತ್ರ ಯಾರೂ ಚಿತ್ರ ಬಿಡಿಸಬೇಡಿ. ಸಾಂಪ್ರದಾಯಿಕ ವಿಧಾನಗಳಿಂದ ಮಾತ್ರ ಚಿತ್ರ ಬಿಡಿಸಿರಿ’ ಎಂದು ತಮ್ಮ ವಿದ್ಯಾರ್ಥಿಗಳಿಗೆ ಹೇಳುತ್ತಾರೆ.

ಬರೋಬ್ಬರಿ 8 ಅಡಿಗಳಷ್ಟು ದೊಡ್ಡದಾದ ಲಿಯನಾರ್ಡೊ ದ ವಿಂಚಿಯ ‘ದಿ ಲಾಸ್ಟ್ ಸಪ್ಪರ್’ ಕಲಾಕೃತಿಯನ್ನು ಮಾಡಿ ಮುಗಿಸಲು ಇವರಿಗೆ ಸುಮಾರು 5 ತಿಂಗಳು ಬೇಕಾಯಿತು. ಯೇಸು ಕ್ರಿಸ್ತ ಸೇರಿದಂತೆ ಅನೇಕ ವ್ಯಕ್ತಿ ಚಿತ್ರಗಳನ್ನು ಪೈಂಟ್ ಮಾಡಿರುವ ಅನಿ, ಜನರೆದುರು ತಮ್ಮ ಕಲೆಯನ್ನು ಪ್ರದರ್ಶನ ಮಾಡುತ್ತಾರೆ. ಆದರೆ ತಮ್ಮ ಕಲಾಕೃತಿಗಳನ್ನು ಮಾರಲು ಇಷ್ಟಪಡುವುದಿಲ್ಲ. ಅನಿಗೆ ಏಕ ಕಾಲದಲ್ಲಿ ಎರಡೂ ಕೈ ಹಾಗೂ ಎರಡೂ ಕಾಲುಗಳನ್ನು ಬಳಸಿಕೊಂಡು ಒಮ್ಮೆಲೇ ನಾಲ್ಕು ವ್ಯಕ್ತಿ ಚಿತ್ರಗಳನ್ನು ರಚಿಸಿ ಗಿನ್ನೆಸ್ ದಾಖಲೆ ಮಾಡುವ ಇರಾದೆಯೂ ಇದೆಯಂತೆ.

■ ವಿದ್ಯಾ ವಿ. ಹಾಲಭಾವಿ



